# ಸುಲಭ

ಸವಿ ಗುರಿ...!



# ಸಮಾಜ ವಿಜ್ಞಾನ

**2018–19**

# ಅಧ್ಯಾಯ: 1 ಭಾರತಕ್ಕೆ ಯುರೋಪಿಯನ್ನರ ಆಗಮನ (2 ಅಂಕಗಳು)

## ವ್ಯಕ್ತಿ ವಿಶೇಷಗಳು/ಕಾರ್ಯಗಳು/ಸಾಧನೆಗಳು :

| ಕ್ರ.ಸಂ | ವ್ಯಕ್ತಿಗಳು | ವಿಶೇಷ/ಕಾರ್ಯಗಳು/ಸಾಧನೆಗಳು |
|---|---|---|
| 1 | **ವಾಸ್ಕೊಡಗಾಮ** | • 1498ರಲ್ಲಿ ಭಾರತಕ್ಕೆ ಹೊಸ ಜಲಮಾರ್ಗ ಕಂಡುಹಿಡಿಸನು. |
| 2 | **ಫ್ರಾನ್ಸಿಸ್ಕೋ ಡಿ ಆಲ್ಮೇಡಾ** | • ಭಾರತಕ್ಕೆ ಬಂದ ಪೋರ್ಚುಗೀಸರ ಮೊಟ್ಟಮೊದಲ ವೈಸರಾಯ.<br>• 'ನೀಲಿ ನೀರಿನ ನೀತಿ' ಜಾರಿಗೆ ತಂದನು. |
| 3 | **ಆಲ್ಫೋನ್ಸೋ ಆಲ್ಬುಕರ್ಕ್** | • ಭಾರತದಲ್ಲಿ ಪೋರ್ಚುಗೀಸಗ ಸಾಮ್ರಾಜ್ಯದ ನೀಜವಾದ ಸ್ಥಾಪಕ. |
| 4 | **ಜಹಾಂಗೀರ** | • ಬ್ರಿಟಿಷರಿಗೆ ಭಾರತದಲ್ಲಿ ಮೋದಲ ವ್ಯಾಪಾರ ಕೋಠಿ ತರೆಯಲು ಅನುಮತಿ ನೀಡಿದ ಮೋಘಲ ಸುಲ್ತಾನ |
| 5 | **ಸರ್.ಥಾಮಸ್ ರೋ** | • ಇಂಗ್ಲೆಂಡಿನ ರಾಜ 1ನೇ ಜೇಮ್ಸ್ ನ ರಾಯಭಾರಿಯಾಗಿ ಭಾರತಕ್ಕೆ ಬಂದು ಜಹಾಂಗೀರನ ಆಸ್ಥಾನಕ್ಕೆ ಭೇಟಿ ನೀಡಿದನು. |
| 6 | **ಡುಪ್ಲೆ** | • ಪ್ರೆಂಚ್ ರ ಪ್ರಸಿದ್ಧ ಗವರ್ನರ. ಇವನು ಭಾರತದಲ್ಲಿ ಪ್ರೆಂಚ್ ಅಧಿಪತ್ಯ ಸ್ಥಾಪಿಸಲು ಹವಣಿಸಿದನು. |
| 7 | **ಲಾಬೋರ್ಡಿನಾ** | • ಪ್ರೆಂಚ್ ಸೇನಾ ಮುಖ್ಯಸ್ಥ. 1ನೇ ಕರ್ನಾಟಿಕ ಯುದ್ದದಲ್ಲಿ ಬ್ರಿಟೀಷರ ಮದ್ರಾಸ್ ವಶಪಡಿಸಿಕೊಂಡಿದ್ದನು |
| 8 | **ಬುಸ್ಸಿ** | • ಪ್ರೆಂಚ್ ಸೇನಾ ಅಧಿಕಾರಿ. ಇವನು ಹೈದರಾಬಾದಿನಲ್ಲಿ ನಿಜಾಮ ಸಲಾಬತ್ ಜಂಗನ ರಕ್ಷಣೆಗಾಗಿ ಅವನ ಆಸ್ಥಾನದಲ್ಲಿದ್ದ. |
| 9 | **ರಾಬರ್ಟ್ ಕ್ಲೈವ್** | • ಬ್ರಿಟಿಷ್ ಗವರ್ನರ.<br>• 2ನೇ ಕರ್ನಾಟಿಕ್ ಯುದ್ಧದಲ್ಲಿ ಆರ್ಕಾಟನ ಚಂದಾಸಾಹೆಬನನ್ನು ಸೋಲಿಸಿದನು.<br>• ಪ್ಲಾಸಿ ಕದನದಲ್ಲಿ ಸಿರಾಜ ಉದ್ದ ದೌಲನನ್ನು ಸೋಲಿಸಿದನು.<br>• ಬಂಗಾಳದಲ್ಲಿ ದ್ವಿ ಪ್ರಭುತ್ವ ಪದ್ಧತಿ ಜಾರಿ ತಂದನು. |
| 10 | **ಸಿರಾಜ ಉದ್ದ ದೌಲ** | • ಬಂಗಾಳದ ನವಾಬನಾಗಿದ್ದನು.<br>• ಪ್ಲಾಸಿ ಕದನದಲ್ಲಿ ರಾಬರ್ಟ್ ಕ್ಲೈವನಿಂದ ಸೋಲು ಅನುಭವಿಸಿ ಕೊಲೆಯಾದನು. |
| 11 | **ಹೆಕ್ಟರ್ ಮನ್ರೋ** | • ಬಕ್ಸಾರ್ ಕದನದಲ್ಲಿ ಮೀರ್ ಖಾಸಿಂನ ಸಂಯುಕ್ತ ಸೈನ್ಯವನ್ನು ಸೋಲಿಸಿದನು. |
| 12 | **ಮೀರ ಜಾಫರ್** | • ಸಿರಾಜ ಉದ್ ದೌಲನ ಸೇನಾಪತಿ. ಪ್ಲಾಸಿಕದಲ್ಲಿ ಬ್ರಿಟಿಷ ಗೆಲುವಿಗಾಗಿ ಸಹಕರಿಸಿ ಬಂಗಾಳದ ನವಾಬನಾದನು. |
| 13 | **ಮೀರ್ ಖಾಸಿಂ** | • ಮೀರ್ ಜಾಫರ್ ನ ಅಳಿಯ. ಮೀರಜಾಪರ್ ನಂತರ ಬಂಗಾಳದ ನವಾಬನಾಗಿ, ಬಕ್ಸಾರ್ ಕದನದಲ್ಲಿ ಬ್ರಿಟಿಷರ್ ವಿರುದ್ಧ ಸೊತನು. |

RGA ಸುಲಭ ಸಿರಿ- 9739138998

## ಪ್ರಮುಖ ಪದಗಳು ಅರ್ಥಗಳು:

| | | |
|---|---|---|
| 1 | ದ್ವಿ ಪ್ರಭುತ್ವ ಪದ್ಧತಿ | • **ಬಂಗಾಲದಲ್ಲಿ ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು** ಹೊಂದಿ, **ನವಾಬನಿಗೆ ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ** ಕಾರ್ಯಗಳನ್ನು ನಿರ್ವಹಿಸುವ ಹಕ್ಕನ್ನು ಬಿಟ್ಟುಕೊಟ್ಟರು. |

| | | |
|---|---|---|
| 2 | ದಸ್ತಕ್ | • ಯಾವುದೇ ತೆರಿಗೆ ಇಲ್ಲದೆ, ಸರಕುಗಲ ಆಮದು ಮತ್ತು ರಫ್ತು ಮಾಡಲು ಹಾಗೂ ಸರಕುಗಳ ಸಾಗಣೆ ಮಾಡಲು ಬೇಕಾದ ಪರವಾನಿಗೆ ಪತ್ರ. |
| 3 | ಕಾಪ್ಪಡ್ | • ವಾಸ್ಕೊಡಗಾಮನು 1498ರಲ್ಲಿ ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪದ 'ಕಾಪ್ಪಡ್' ಎಂಬ ಪ್ರದೇಶಕ್ಕೆ ತಲುಪಿದನು. |
| 4 | ನೀಲಿ ನೀರಿನ ನೀತಿ | • ಫ್ರಾನ್ಸಿಸ್ಕೊ ಡಿ ಆಲ್ಮೆಡನು ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವ 'ನೀಲಿ ನೀರಿನ ನೀತಿ' ಯನ್ನು ಜಾರಿಗೆ ತಂದನು. |
| 5 | ಆಸ್ಟ್ರೋಲೋಬ್ | • ನಕ್ಷತ್ರಗಳ ಉನ್ನತಿ ಅಳೆಯುವ ಮಾಪನ |
| 6 | ದಿವಾನಿ ಹಕ್ಕು | • ಭೂ ಕಂದಾಯ ವಸೂಲಿ ಮಾಡುವ ಹಕ್ಕು. |

## ಪ್ರಮುಖ ಒಪ್ಪಂದಗಳು:

| | | |
|---|---|---|
| 1 | ಏಕ್ಸ್ ಲಾ ಚಾಪೆಲ್ | • ಪ್ರಾನ್ಸ ಮತ್ತು ಇಂಗ್ಲೆಂಡ್ ನಡುವೆ ನಡೆಯಿತು.<br>• ಮೊದಲ ಕಾರ್ನಾಟಿಕ್ ಯುದ್ಧ ಕೊನೆಯಾಯಿತು. |
| 2 | ಪಾಂಡಿಚೇರಿ ಒಪ್ಪಂದ | • ಬ್ರಿಟಿಷರು ಮತ್ತು ಪ್ರೆಂಚ್ ರ ನಡುವೆ ನಡೆಯಿತು.<br>• ಎರಡನೆಯ ಕಾರ್ನಾಟಿಕ್ ಯುದ್ಧ ಕೊನೆಯಾಯಿತು.<br>• ಪ್ರೆಂಚ್ ರು ಡುಪ್ಲೆಯನ್ನು ಹಿಂದಕ್ಕೆ ಕರೆಸಿಕೊಂಡರು. |
| 3. | ಪ್ಯಾರಿಸ್ ಒಪ್ಪಂದ | • ಬ್ರಿಟಿಷರು ಮತ್ತು ಪ್ರೆಂಚ್ ರ ನಡುವೆ ನಡೆಯಿತು.<br>• ಪಾಂಡಿಚೇರಿಯನ್ನು ಪ್ರೆಂಚ್ ರಿಗೆ ಹಿಂದುರಿಗಿಸಲಾಯಿತು.<br>• ಮೂರನೆಯ ಕಾರ್ನಾಟಕ್ ಯುದ್ಧ ಕೊನೆಯಾಯಿತು.<br>• ಪ್ರೆಂಚರು ದಕ್ಷಿಣ ಭಾರತದಲ್ಲಿ ಮೂಲೆಗುಂಪಾದರು. |

## ಅತಿ ಕಿರು ಮತ್ತು ಕಿರು ಉತ್ತರಗಳಿಗಾಗಿ ಮುಖ್ಯಾಂಶಗಳು:

### ಭಾರತ ಮತ್ತು ಯುರೋಪಿನ ನಡುವಿನ ಪ್ರಾಚೀನ ಮತ್ತು ಮಧ್ಯ ಕಾಲದ ವಾಣಿಜ್ಯ ಸಂಬಂಧ:

- ಭಾರತದ **ಸಾಂಬಾರ ಪದಾರ್ಥಗಳಿಗೆ** ಬೇಡಿಕೆ ಇತ್ತು.
- ಏಷ್ಯಾದ ಸರಕುಗಳು ಕಾನ್‌ಸ್ಟಾಂಟಿನೋಪಲ್ ನಗರ ತಲುತ್ತಿದ್ದವು.
- **ಅರಬ್ ವರ್ತಕರು** ಮಧ್ಯವರ್ತಿಗಳಾಗಿದ್ದರು.
- **ಇಟಲಿಯ ವರ್ತಕರು** ಸರಕುಗಳನ್ನು ಯುರೋಪಿನ ದೇಶಗಳಲ್ಲಿ ಮಾರುತ್ತಿದ್ದರು.
- **ಕಾನ್‌ಸ್ಟಾಂಟಿನೋಪಲ್** ಅಂತಾರಾಷ್ಟ್ರೀಯ ಸರಕು ವಿನಿಮಯ **ಕೇಂದ್ರವಾಗಿತ್ತು.**
- **ಕಾನ್‌ಸ್ಟಾಂಟಿನೋಪಲ್** ಯುರೋಪಿನ **ವ್ಯಾಪಾರದ ಹೆಬ್ಬಾಗಿಲೆಂದು** ಪರಿಗಣಿಸಲ್ಪಟ್ಟಿತು.
- ಏಷ್ಯಾ ದೇಶಗಳ ವ್ಯಾಪಾರದ ಮೇಲೆ **ಅರಬರು ಏಕಸ್ವಾಮ್ಯ** ಸಾಧಿಸಿದ್ದರು,
- ಯುರೋಪಿನ ದೇಶಗಳ ವ್ಯಾಪಾರದ ಮೇಲೆ **ಇಟಲಿಯ ವರ್ತಕರು ಏಕಸ್ವಾಮ್ಯ** ಸಾಧಿಸಿದ್ದರು.

RCA ಸುಲಭ ಸಂಗ್ರಹ - 9739138998

**ಹೊಸ ಸಮುದ್ರ ಮಾರ್ಗಗಳನ್ನು ಹುಡುಕುವ ಅನಿವಾರ್ಯತೆ ಮತ್ತು ಪ್ರೇರಣೆ:**

- **ಆಟೋಮಾನ್ ಟರ್ಕರಿಂದ** ಕಾನ್‌ಸ್ಟಾಂಟಿನೋಪಲ್ ನಗರ ವಶ.
- ವ್ಯಾಪಾರ ಮಾರ್ಗಗಳು ಮೇಲೆ **ಟರ್ಕರ ನಿಯಂತ್ರಣ** .
- ವ್ಯಾಪಾರ ಮಾರ್ಗದ ಮೇಲೆ **ಹೆಚ್ಚಿನ ತೆರಿಗೆಗಳನ್ನು** ವಿಧಿಸಿದ್ದು.
- ವ್ಯಾಪಾರದ ಲಾಭದಾಯಕವಾಗದೇ ಇರುವದು.
- ಇಟಲಿಯ ವರ್ತಕರ **ಏಕಸ್ವಾಮ್ಯವನ್ನು ಮುರಿಯುವ** ಬಯಕೆ.
- ರಾಜರಿಂದ ಜಲ ಮಾರ್ಗ ಕಂಡುಹಿಡಿಯಲು **ಪ್ರೋತ್ಸಾಹ**.
- **ಹೊಸ ವೈಜ್ಞಾನಿಕ ಆವಿಷ್ಕಾರಗಳು (ದಿಕ್ಸೂಚಿ, ಆಸ್ಟ್ರೋಲೋಬ್ (ನಕ್ಷತ್ರ ಉನ್ನತಿ ಮಾಪನ), ಸಿಡಿಮದ್ದು),**
.

## ಬ್ರಿಟಿಷರು ಮತ್ತು ಫ್ರೆಂಚರ ನಡುವಿನ ಪ್ರತಿಸ್ಪರ್ಧೆ – ಕಾರ್ನಾಟಿಕ್ ಯುದ್ಧಗಳು :

| ಯುದ್ಧಗಳು | ಕಾರಣಗಳು | ಘಟನೆಗಳು | ಪರಿಣಾಮಗಳು |
|---|---|---|---|
| **ಮೊದಲನೆಯ ಕರ್ನಾಟಿಕ್ ಯುದ್ಧ** (1746–48) | • ಫ್ರೆಂಚ್ ಸೇನಾ ಮುಖ್ಯಸ್ಥ ಲಾಬೋರ್ಡಿನಾ ಬ್ರಿಟಿಷರ ಮದ್ರಾಸನ್ನು ವಶಪಡಿಸಿಕೊಂಡದ್ದು. | • ಬ್ರಿಟಿಷರು ಅನ್ವರುದ್ದೀನ ಸಹಾಯ ಕೋರಿದರು.<br>• ಫ್ರೆಂಚರ ವಿರುದ್ಧ ಅನ್ವರುದ್ದೀನ ಸೋಲು. | • ಯುರೋಪಿನಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡಿನ ನಡುವೆ 'ಏಕ್ಸ್–ಲಾ–ಚಾಪೆಲ್ ಒಪ್ಪಂದ'.<br>• ಯುದ್ಧ ಅಂತ್ಯ |
| **ಎರಡನೆಯ ಕರ್ನಾಟಿಕ್ ಯುದ್ಧ** (1749–54) | • ಫ್ರೆಂಚರು ಹೈದರಬಾದನಲ್ಲಿ ಸಲಾಬತ್ಜಂಗನನ್ನು ನಿಜಾಮನಾಗಿ ಮತ್ತು ಕಾರ್ನಾಟಿಕದಲ್ಲಿ ಚಂದಾಸಾಹೇಬನನ್ನು ನವಾಬನಾಗಿ ಮಾಡಿ ತಮ್ಮ ಪ್ರಾಭಲ್ಯ ಹೆಚ್ಚಿಸಿಕೊಂಡದ್ದು. | • ಬ್ರಿಟಿಷ್ ಅಧಿಕಾರಿ ರಾಬರ್ಟ್ ಕ್ಲೈವ್ ನು ಆರ್ಕಾಟ ಮೇಲೆ ದಾಳಿ ಮಾಡಿ ಫ್ರೆಂಚ್ ರನ್ನು ಮತ್ತು ಚಂದಾಸಾಹೇಬನನ್ನು ಸೋಲಿಸಿದನು.<br>• ಚಂದಾಸಾಹೇಬನನ್ನು ಹತ್ಯ ಮಾಡಲಾಯಿತು.<br>• ಬ್ರಿಟಿಷರು ಕಾರ್ನಾಟಿಕದ ನವಾಬನಾಗಿ ಮಹಮ್ಮದ್ ಅಲಿಯನ್ನಾಗಿ ಮಾಡಿದರು. | • '**ಪಾಂಡಿಚೇರಿ ಒಪ್ಪಂದ**' ದೊಂದಿಗೆ ಯುದ್ಧ ಅಂತ್ಯ.<br>• ಫ್ರೆಂಚ್ ರಿಗೆ ರಾಜಕೀಯ ಹಿನ್ನಡೆಯಾಯಿತು.<br>• ಬ್ರಿಟಿಷರಿಗೆ ಪ್ರತಿಷ್ಠೆ ತಂದಿತು |
| **ಮೂರನೆಯ ಕರ್ನಾಟಿಕ್ ಯುದ್ಧ** (1756–63) | • ಫ್ರೆಂಚರ ಕೌಂಟ್ ಡಿ ಲಾಲಿ ಯು 1760ರಲ್ಲಿ ಬ್ರಿಟಿಷರ್ **ವಾಂಡಿವಾಷ್** ಕೋಟೆ ಮುತ್ತಿಗೆ ಹಾಕಲು ಪ್ರಯತ್ನಿಸಿದ್ದು. | • ಬ್ರಿಟಿಷ ಸೇನಾಧಿಕಾರಿ **ಸರ್ ಐರ್ ಕೂಟನು** ಫ್ರೆಂಚರನ್ನು ಸೋಲಿಸಿದನು.<br>• ಫ್ರೆಂಚ್ **ಬುಸ್ಸಿಯನ್ನು** ಬ್ರಿಟಿಷರು ಸೆರೆಹಿಡಿದರು.<br>• ಸರ್ ಐರ್ ಕೂಟನಿಂದ ಪಾಂಡಿಚೇರಿ ಮುತ್ತಿಗೆ. | • 1761ರಲ್ಲಿ ಲಾಲಿಯು ಪಾಂಡಿಚೇರಿಯಲ್ಲಿ ಬೇಷರತ್ತಾಗಿ ಶರಣಾದನು.<br>• ಫ್ರೆಂಚರು ತಮ್ಮ ಎಲ್ಲಾ ನೆಲೆಗಳನ್ನು ಕಳೆದುಕೊಂಡರು.<br>• '**ಪ್ಯಾರಿಸ್ ಒಪ್ಪಂದ**' ಯುದ್ಧ ಕೊನೆ.<br>• ಪಾಂಡಿಚೇರಿಯನ್ನು ಫ್ರೆಂಚರಿಗೆ ಹಿಂದುರಿಗಿಸಲಾಯಿತು |

## ಪ್ರಮುಖ ಇಸ್ವಿಗಳು:

| | |
|---|---|
| **1453** | **ಆಟೋಮನ್ ಟರ್ಕರಿಂದ ಕಾನಸ್ಟಂಟಿನೋಪಲ್ ನಗರ ವಶ, ಪತನ** |
| **1498** | **ವಾಸ್ಕೋ ಡಿ ಗಾಮನು ಭಾರತಕ್ಕೆ ಜಲಮಾರ್ಗವನ್ನು ಶೋಧಿಸಿದನು** |
| **1600** | **ಇಂಗ್ಲಿಷ್ ಈಸ್ಟ ಇಂಡಿಯಾ ಕಂಪನಿಯನ್ನು ಇಂಗ್ಲೆಂಡಿನಲ್ಲಿ ಸ್ಥಾಪಿಸಲಾಯಿತು.** |

**ಇಂಗ್ಲಿಷ್ ಈಸ್ಟ ಇಂಡಿಯಾ ಕಂಪನಿಯು ಬಂಗಾಳ ಪ್ರಾಂತ್ಯದಿಂದ ಅಪಾರ ಲಾಭ ಗಳಿಸಲು ಕಾರಣ:**

**ಬಂಗಾಳದ ನವಾಬ ಮತ್ತು ಬ್ರಿಟಿಷ್ ಕಂಪನಿಯ ಸಂಘರ್ಷಕ್ಕೆ ಕಾರಣಗಳು:**

- ಬಂಗಾಳ ಪ್ರಾಂತ್ಯದ ಕೃಷಿ, ವಾಣಿಜ್ಯ ಮತ್ತು ಕೈಗಾರಿಕಾ ಕ್ಷೇತ್ರಗಳ ಅಭಿವೃದ್ಧಿ.
- ಫಾರೂಕ್ ಶಿಯಾರನಿಂದ ಬ್ರಿಟಿಷರು ಮುಕ್ತ ವ್ಯಾಪಾರ ಮಾಡಲು '**ದಸ್ತಕ**'ಗಳನ್ನು ಪಡೆದದ್ದು.
- ಕಂಪನಿ ನೌಕರರ ಖಾಸಗಿ ವ್ಯಾಪಾರ.
- ಬಂಗಾಳದ ಸರ್ಕಾರಕ್ಕೆ ಅಪಾರ ನಷ್ಟವಾದ್ದರಿಂದ
- ನವಾಬನ ದಸ್ತಕ್ ಗಳ ದುರುಪಯೋಗ ವಿರೋಧ.

### ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ – ಬಂಗಾಳ ಪ್ರಾಂತ್ಯದ ಮೇಲೆ ನಿಯಂತ್ರಣ :

| ಯುದ್ಧಗಳು | ಕಾರಣಗಳು | ಘಟನೆಗಳು | ಪರಿಣಾಮಗಳು |
|---|---|---|---|
| **ಪ್ಲಾಸಿ ಕದನ**<br>(1757)<br>**(ಸಿರಾಜ–ಉದ್–ದೌಲ ಮತ್ತು ಬ್ರಿಟಿಷರ್ ನಡುವೆ)** | • **ದಸ್ತಕ್ ಗಳ** ದುರುಪಯೋಗ<br>• ನವಾಬನ ಅನುಮತಿಯಿಲ್ಲದೆ ಬ್ರಿಟಿಷರು **ಕಲ್ಕತ್ತಾ ಕೋಟೆ ದುರಸ್ಥಿ** ಮಾಡಿದ್ದು.<br>• ಸಿರಾಜನ **ಕಪ್ಪುಕೋಣೆ ದುರಂತ** ಇಲ್ಲಿ 123 ಬ್ರಿಟಿಷರು ಸಾವನ್ನಪ್ಪಿದ್ದು. | • **ರಾಬರ್ಟ್ ಕ್ಲೈವನು** ನವಾಬನ ಶತ್ರುಗಳನ್ನು ತನ್ನತ್ತ ಸೇಳೆದನು.<br>• ಮೀರಜಾಫರನಿಗೆ ಬಂಗಾಳದ **ನವಾಬನ ಪಟ್ಟ** ನೀಡುವ ಬರವಸೆ.<br>• 1757ರಲ್ಲಿ ನಡೆದ ಪ್ಲಾಸಿ ಕದನದಲ್ಲಿ ಕ್ಲೈವನು ಸಿರಾಜನನ್ನು ಸೋಲಿಸಿದನು. | • ಭಾರತೀಯರ ಅನೈಕ್ಯತೆ, ಅಸಂಘಟನೆ ಮತ್ತು ವ್ಯಾಪಾರ ಲೋಭಿತನ ತೋರಿಸಿತು.<br>• ಮೀರಜಾಫರ್ ಬಂಗಾಳದ ನವಾಬನಾದನು<br>• ಬ್ರಿಟಿಷರು ಬಂಗಾಳದಲ್ಲಿ ಅನಿರ್ಬಂಧಿತ ವ್ಯಾಪಾರ ಹಕ್ಕು ಪಡೆದರು.<br>• ಕಂಪನಿಗೆ ಮೀರ ಜಾಫರನಿಂದ 17ಕೋಟಿ 70ಲಕ್ಷ ರೂ ದೊರೆಯಿತು. |
| **ಬಕ್ಸಾರ್ ಕದನ**<br>(1764)<br>**(ಮೀರಖಾಸಿಂ ಮತ್ತು ಬ್ರಿಟಿಷ್ ರ ನಡುವೆ)** | • ಮೀರ್ ಖಾಸಿಂನು **ಸ್ವತಂತ್ರ ರಾಜ** ನೆಂದು ಭಾವಿಸಿದ್ದು.<br>• ನವಾಬನು ಬಂಗಾಳದ ಎಲ್ಲಾ ವ್ಯಾಪಾರವನ್ನು **ಸುಂಕ ಮುಕ್ತ** ಎಂದು ಘೋಷಿಸಿದ್ದು.<br>• ಬ್ರಿಟಿಷರು ಮೀರಖಾಸಿಂ ಬದಲಿಗೆ ಮೀರಜಾಫರನ್ನು ಬಂಗಾಳದ ನವಾಬನನ್ನಾಗಿ ಮಾಡಿದ್ದು. | • ಮೀರಖಾಸಿಂನು ಭಾರತೀಯ ವ್ಯಾಪಾರಿಗಳ ಮತ್ತು ಕಸಬುದಾರರ ಬೆಂಬಲ ಪಡೆದನು.<br>• ಮೊಘಲ ದೊರೆ '**2ನೇ ಷಾ ಆಲಂ**' ಮತ್ತು ಔದ್ ನವಾಬ '**ಷುಜಾ–ಉದ್–ದೌಲ್**' ನಡುವೆ ಮೀರಖಾಸಿಂ ಒಪ್ಪಂದ ಮಾಡಿಕೊಂಡನು.<br>• 1764ರಲ್ಲಿ **ಹೆಕ್ಟರ್ ಮನ್ರೋ** ಮೀರ್ ಖಾಸಿಂನ ಸಂಯುಕ್ತ ಸೇನೆಯನ್ನು ಸೋಲಿಸಿದನು. | • ಷಾ ಆಲಂನಿಂದ ಕಂಪನಿ ಬಂಗಾಳದ ದಿವಾನಿ ಹಕ್ಕು ಪಡೆಯಿತು.<br>• ವಾರ್ಷಿಕ 26 ಲಕ್ಷ ರೂ ಪಡೆದು ತನ್ನ ಎಲ್ಲಾ ಹಕ್ಕುಗಳನ್ನು ಷಾ ಆಲಂ ಬಿಟ್ಟುಕೊಟ್ಟನು.<br>• ಷುಜಾ ಉದ್ದ ದೌಲನು ಯುದ್ಧ ಪರಿಹಾರವಾಗಿ 50ಲಕ್ಷ ಬ್ರಿಟಿಷರಿಗೆ ನೀಡಿದನು.<br>• ಬಂಗಾಳದ ಪೂರ್ಣ ಆಡಳಿತ ಕಂಪನಿಗೆ ಸೇರಿತು. |

9739138998

**ಪ್ರಮುಖ ಇಸ್ವಿಗಳು:**

| | |
|---|---|
| 1602 | ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿಯನ್ನು ನೆದರ್ಲ್ಯಾಂಡನಲ್ಲಿ ಸ್ಥಾಪನೆ |
| 1664 | ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯನ್ನು ಫ್ರಾನ್ಸ್ ನಲ್ಲಿ ಸ್ಥಾಪನೆ |
| 1757 | ಪ್ಲಾಸ್ಸಿ ಕದನ |
| 1764 | ಬಕ್ಸಾರ್ ಕದನ ನಡೆಯಿತು. |

## ಇತಿಹಾಸ ಅಧ್ಯಾಯ-2 ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ (2 ಅಂಕಗಳು)

**ವ್ಯಕ್ತಿ ವಿಶೇಷಗಳು/ಕಾರ್ಯಗಳು/ಸಾಧನೆಗಳು :**

| ಕ್ರ.ಸಂ | ವ್ಯಕ್ತಿಗಳು | ವಿಶೇಷ/ಕಾರ್ಯಗಳು/ಸಾಧನೆಗಳು |
|---|---|---|
| 1 | ಲಾರ್ಡ್ ವೆಲ್ಲಸ್ಲಿ | • ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದನು.<br>• ಭಾರತದಲ್ಲಿ ಸಾಮ್ರಾಜ್ಯವನ್ನು ದೊಡ್ಡ ಪ್ರಮಾಣದಲ್ಲಿ ವಿಸ್ತರಿಸಿದನು. |
| 2 | ಲಾರ್ಡ್ ಡಾಲ್ ಹೌಸಿ | • 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯನ್ನು ಜಾರಿಗೆ ತಂದನು. |

## ಅತಿ ಕಿರು ಮತ್ತು ಕಿರು ಉತ್ತರಗಳಿಗಾಗಿ ಮುಖ್ಯಾಂಶಗಳು:

**ಬ್ರಿಟಿಷರ ವಿಸ್ತರಣಾ ನೀತಿಗೆ ಅಡ್ಡಿಯಾಗಿದ್ದವರು:**

- ಮಹಾರಾಷ್ಟ್ರದ ಮರಾಠ **ಪೇಶ್ವೆಗಳು.**
- ಮೈಸೂರು ಸಂಸ್ಥಾನದಲ್ಲಿ **ಹೈದರಾಲಿ ಮತ್ತು ಅವನ ಮಗ ಟೀಪ್ಪುಸುಲ್ತಾನ್.**
- ವಾಯುವ್ಯ ಭಾರತದಲ್ಲಿ ಸಿಖ್ಖರ **ರಣಜಿತ್ ಸಿಂಗ.**

**ಬ್ರಿಟಿಷರ ವಿಸ್ತರಣಾ ನೀತಿಗೆ ಸಹಾಯಕವಾದ ನೀತಿಗಳು:**

- ಲಾರ್ಡ್ ವೆಲ್ಲಸ್ಲಿ ಜಾರಿಗೆ ತಂದ **'ಸಹಾಯಕ ಸೈನ್ಯ ಪದ್ಧತಿ'**
- ಲಾರ್ಡ್ ಡಾಲ್ ಹೌಸಿ ಜಾರಿಗೆ ತಂದ **'ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿ.**

**ಲಾರ್ಡ್ ವೆಲ್ಲೆಸ್ಲಿ (1798–1805) ಮತ್ತು ಸಹಾಯಕ ಸೈನ್ಯ ಪದ್ಧತಿ:**

**'ಲಾರ್ಡ್ ವೆಲ್ಲೆಸ್ಲಿಯ ಆಗಮನದ ನಂತರ ಭಾರತದಲ್ಲಿ ಬ್ರಿಟಿಷರ ಸಾಮ್ರಾಜ್ಯ ವಿಸ್ತರಣೆಯು ದೊಡ್ಡ ಪ್ರಮಾಣದಲ್ಲಾಯಿತು' ಸಮರ್ಥನೆ.**

- ಬಲಿಷ್ಠ ಮರಾಠ ಮತ್ತು ಮೈಸೂರು ರಾಜ್ಯಗಳು ದುರ್ಬಲಗೊಂಡಿದ್ದವು.
- ವಿಸ್ತರಣಾ ನೀತಿ ಗುರಿಯನ್ನು ಸಾಧಿಸಲು ಅವನು ಮೂರು ವಿಧಾನಗಳನ್ನು ಅನುಸರಿಸಿದನು.
  1. ಸಹಾಯಕ ಸೈನ್ಯ ಪದ್ಧತಿ,
  2. ಹೊಸ ರಾಜ್ಯಗಳ ಮೇಲೆ ಯುದ್ಧಗಳು ಮತ್ತು
  3. ಕಂಪನಿಯ ಅಧೀನಕ್ಕೆ ಒಳಪಟ್ಟಿರುವ ರಾಜ್ಯಗಳನ್ನು ನೇರ ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವುದು.

**ಸಹಾಯಕ ಸೈನ್ಯ ಪದ್ಧತಿ:**

**'ಸಹಾಯಕ ಸೈನ್ಯ ಪದ್ಧತಿಯು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಭಾರತೀಯ ರಾಜ್ಯಗಳ ನಡುವಿನ ಒಂದು ಸೈನಿಕ ಒಪ್ಪಂದವಾಗಿತ್ತು' ಸಮರ್ಥನೆ:**

- ಸಹಾಯಕ ಸೈನ್ಯ ಪದ್ಧತಿ ಎಂಬ ನೀತಿಯನ್ನು **ವೆಲ್ಲೆಸ್ಲಿಯು 1798ರಲ್ಲಿ ಜಾರಿಗೆ ತಂದನು.**

**ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳು:**

- ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
- ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು ಅಥವಾ
- ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.
- ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
- ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ.

- ಬೇರೆ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು.
- ಇದಕ್ಕೆ ಪ್ರತಿಯಾಗಿ ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

**ಸಹಾಯಕ ಸೈನ್ಯ ಪದ್ಧತಿಯ ಪರಿಣಾಮಗಳು:**

- ಬ್ರಿಟಿಷರ ಸೈನಿಕ ನಿರ್ವಹಣೆ ಸುಲಭವಾಯಿತು.
- ಭಾರತೀಯ ರಾಜ್ಯಗಳನ್ನು ನಿಯಂತ್ರಣದಲ್ಲಿಡಲು ಸಾಧ್ಯವಾಯಿತು.
- ಭಾರತೀಯ ರಾಜ್ಯಗಳನ್ನು ಆರ್ಥಿಕವಾಗಿ ತೀವ್ರ ಶೋಷಣೆಗೆ ಗುರಿಪಡಿಸಲಾಯಿತು.
- **ಈ ಒಪ್ಪಂದಕ್ಕೆ ಸಹಿ ಮಾಡಿದ ಮೊದಲ ರಾಜ್ಯ ಹೈದರಾಬಾದ್ ಸಂಸ್ಥಾನ.**
- ಮೈಸೂರು, ಔದ್, ತಂಜಾವೂರು, ಮರಾಠ, ಆರ್ಕಾಟ್, ಪೂನಾ, ಬಿರಾರ್, ಗ್ವಾಲಿಯರ್ ಮೊದಲಾದ ರಾಜ್ಯಗಳು ಈ ಒಪ್ಪಂದಕ್ಕೆ ಒಳಪಟ್ಟವು.

**ಆಂಗ್ಲೋ–ಮರಾಠ ಯುದ್ಧಗಳು:**

**ಮೊದಲ ಆಂಗ್ಲೋ–ಮರಾಠ ಯುದ್ಧ (1775–1782):**

**ಯುದ್ಧಕ್ಕೆ ಕಾರಣಗಳು:**

- ಮರಾಠರು ಮೊಗಲ್ **ಚಕ್ರವರ್ತಿ ಎರಡನೇ ಷಾ ಆಲಂನನ್ನು** ದೆಹಲಿಯ ಸಿಂಹಾಸನದಲ್ಲಿ ಕುರಿಸಿದ್ದು.
- ಚಕ್ರವರ್ತಿಯು **ಕೋರ ಮತ್ತು ಅಲಹಾಬಾದ್‌ಗಳನ್ನು** ಮರಾಠರಿಗೆ ಕೊಟ್ಟದ್ದು.
- ಪೇಶ್ವೆಯ ಸ್ಥಾನಕ್ಕೆ ಏರ್ಪಟ್ಟ ಕಲಹ.
- ರಘೋಬನು ಬ್ರಿಟಿಷರ ಬೆಂಬಲ ಕೋರಿದ್ದು.

**ಯುದ್ಧದ ಘಟನಾವಳಿಗಳು:**

- ಪೇಶ್ವೆ **ಮಾಧವರಾವ್ ಮರಣದ** ನಂತರ ಪೇಶ್ವೆಯ ಸ್ಥಾನಕ್ಕೆ ಅವನ ತಮ್ಮ **ನಾರಾಯಣರಾಯನು** ಬಂದನು.
- ನಾರಾಯಣರಾಯನನ್ನು ಚಿಕ್ಕಪ್ಪ ರಘೋಬನು ಕೊಲೆ ಮಾಡಿದನು.
- **ನಾನಾ ಫಡ್ನವೀಸ್ ನೇತೃತ್ವದಲ್ಲಿ ಎರಡನೇ ಮಾಧವರಾವ್‌ಗೆ** ಪೇಶ್ವೆ ಪಟ್ಟಕಟ್ಟಲಾಯಿತು.
- ಪೇಶ್ವೆ ಸ್ಥಾನಾಂಕ್ಷಿ ರಘೋಬನು ಬ್ರಿಟಿಷರ ಬೆಂಬಲ ಕೋರಿದನು.

**ಯುದ್ಧದ ಪರಿಣಾಮಗಳು:**

- ಮರಾಠ ಒಕ್ಕೂಟವು ಯುದ್ಧದಲ್ಲಿ ಬ್ರಿಟಿಷರ ವಿರುದ್ಧ ಸೋತರು.
- ಮರಾಠರು ಬ್ರಿಟಿಷರೊಂದಿಗೆ **ಸಾಲ್‌ಬಾಯ್ ಒಪ್ಪಂದವನ್ನು** ಮಾಡಿಕೊಂಡಿತು.
- **2ನೇ ಮಾಧವರಾವನನ್ನು ಪೇಶ್ವೆಯಾಗಿ** ನೇಮಿಸಲಾಯಿತು.

**ಎರಡನೇ ಆಂಗ್ಲೋ–ಮರಾಠ ಯುದ್ಧ (1803–1805):**

**ಯುದ್ಧಕ್ಕೆ ಕಾರಣಗಳು:**

- ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷ.

**ಯುದ್ಧದ ಘಟನಾವಳಿಗಳು:**

- ಹೋಳ್ಕರ್ ಮನೆತನದ ಯಶವಂತರಾವ್ ವಿರುದ್ಧ ಸಿಂಧಿಯಾ ಮನೆತನದ ದೌಲತ್ ರಾವ್ ಹಾಗೂ ಪೇಶ್ವೆ ಎರಡನೇ ಬಾಜಿರಾವ್ ಒಂದಾಗಿದ್ದರು.
- 1802ರಲ್ಲಿ ಹೋಳ್ಕರ್ ಸೈನ್ಯವು ಸಿಂಧಿಯಾ ಮತ್ತು ಪೇಶ್ವೆಯ ಸೈನ್ಯವನ್ನು ಸೋಲಿಸಿತು.
- ಪೇಶ್ವೆ ಎರಡನೇ ಬಾಜಿರಾವ್ ಬ್ರಿಟಿಷರ ಸಹಾಯ ಯಾಚಿಸಿದನು.
- ಲಾರ್ಡ್ ವೆಲ್ಲೆಸ್ಲಿಗೆ ಮರಾಠರ ಆಂತರಿಕ ವಿಚಾರದ ಅವಕಾಶ ಪಡೆದನು.

**ಯುದ್ಧದ ಪರಿಣಾಮಗಳು:**

- ಪೇಶ್ವೆಯು **ಬೆಸ್ಸಿನ್ ಒಪ್ಪಂದಕ್ಕೆ** ಸಹಿ ಹಾಕಿದನು.
- ಪೇಶ್ವೆಯು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು.
- ಸಹಾಯಕ ಸೈನ್ಯ ಪದ್ಧತಿಯನ್ನು ಹೋಳ್ಕರ್, ಭೋಂಸ್ಲೆ, ಸಿಂಧಿಯಾ ವಿರೋಧಿಸಿದರು.
- ವೆಲ್ಲೆಸ್ಲಿಯ ಯುದ್ಧಪ್ರಿಯ ನೀತಿಯಿಂದ ಕಂಪನಿಗೆ ಸಾಲದ ಹೊರೆ ಹೆಚ್ಚಿತು.
- ವೆಲ್ಲೆಸ್ಲಿಯು ತನ್ನ ಹುದ್ದೆಗೆ ರಾಜಿನಾಮೆ ನೀಡಿ ಸ್ವದೇಶಕ್ಕೆ ಮರಳಿದ್ದರಿಂದ ಯುದ್ಧ ಕೊನೆಗೊಂಡಿತು.

**ಮೂರನೇ ಆಂಗ್ಲೋ–ಮರಾಠ ಯುದ್ಧ (1817–1818):**

**ಯುದ್ಧಕ್ಕೆ ಕಾರಣಗಳು:**

- ಮರಾಠ ಮನೆತನಗಳು ತಮ್ಮ ಘನತೆ ಮತ್ತು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಿದ್ದು.
- ಪೇಶ್ವೆ ಬ್ರಿಟಿಷರ ನಿಯಂತ್ರಣದಿಂದ ಮುಕ್ತಗೊಳ್ಳಲು ಬಯಸಿದನು.

RGA ಸುಲಭ ವಿಜಿನ್ 9739138998

- 1817ರಲ್ಲಿ ಪೇಶ್ವೆಯು **ಪೂನಾದಲ್ಲಿನ** ಬ್ರಿಟಿಷ್ ರೆಸಿಡೆನ್ಸಿಯ ಮೇಲೆ ದಾಳಿ ನಡೆಸಿ ಸುಟ್ಟದ್ದು.

**ಯುದ್ದದ ಘಟನಾವಳಿಗಳು:**

- **ನಾಗಪುರದ ಅಪ್ಪಾಸಾಹೇಬ ಮತ್ತು ಮಲ್ಹಾರರಾವ್ ಹೋಳ್ಕರ್** ಕೂಡ ಬ್ರಿಟಿಷರ ವಿರುದ್ಧ ದಂಗೆ ಎದ್ದು ಸೋತರು.
- ಪೇಶ್ವೆ ಎರಡನೇ ಬಾಜಿರಾಯನು ಬ್ರಿಟಿಷರ ವಿರುದ್ಧ 1818ರಲ್ಲಿ **ಕೋರೇಗಾವ್ ಮತ್ತು ಅಷ್ಟಿ ಯುದ್ಧಗಳಲ್ಲಿ ಸೋತು** ಶರಣಾದನು.

**ಯುದ್ದದ ಪರಿಣಾಮಗಳು:**

- ಪ್ಏಶ್ವೆ ಪದವಿಯನ್ನು ರದ್ದುಗೊಳಿಸಿ ಬಾಜಿರಾಯನಿಗೆ ವಿಶ್ರಾಂತಿ ವೇತನ ನೀಡಲಾಯಿತು.
- ಶಿವಾಜಿಯ ವಂಶಸ್ಥ **ಪ್ರತಾಪಸಿಂಹನನ್ನು** ಸಣ್ಣ ರಾಜ್ಯ ಸತಾರಾದ ಮುಖಂಡನಾಗಿಸಿದರು.

**ಬ್ರಿಟಿಷ್ ಅಧಿಕಾರದ ಕ್ರೋಢೀಕರಣ (1818–1857):**

**ಆಂಗ್ಲೋ-ಸಿಖ್ ಯುದ್ಧಗಳು:**

- 1839ರಲ್ಲಿ **ರಣಜಿತ್ ಸಿಂಗನು** ಮರಣ ಹೊಂದಿದ ನಂತರ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿತು.
- 1809ರ '**ನಿರಂತರ ಮೈತ್ರಿ ಒಪ್ಪಂದ**' ವನ್ನು ಉಲ್ಲಂಘಿಸಿ ಪಂಜಾಬನ್ನು ಆಕ್ರಮಿಸಲು ಬ್ರಿಟಿಷರು ಸಂಚು ರೂಪಿಸಿದರು.
- 1845ರಲ್ಲಿ ಬ್ರಿಟಿಷರಿಗೂ ಪಂಜಾಬ್ ಸೈನ್ಯಕ್ಕೂ ಯುದ್ಧ ಆರಂಭವಾಯಿತು.
- ವಿದೇಶಿಯರ ಅಪಾಯವನ್ನರಿತ ಹಿಂದೂ, ಮುಸಲ್ಮಾನ ಹಾಗೂ ಸಿಖ್ಖರೆಲ್ಲರೂ ಒಂದಾಗಿ ಹೋರಾಡಿದರೂ ಕೆಲವು ದೇಶದ್ರೋಹಿ ನಾಯಕರಿಂದ ಸೋಲೊಪ್ಪಬೇಕಾಯಿತು.
- **ಲಾಹೋರ್ ಒಪ್ಪಂದಕ್ಕೆ 1846ರಲ್ಲಿ ಸಹಿ ಹಾಕಬೇಕಾಯಿತು.**
- ಬ್ರಿಟಿಷ್ **ರೆಸಿಡೆಂಟನು** ಪಂಜಾಬಿನ ನಿಜವಾದ ಆಡಳಿತಗಾರನಾದನು.
- ಪಂಜಾಬ್ ಬ್ರಿಟಿಷ್ ಆಶ್ರಿತ ರಾಜ್ಯವಾಯಿತು.

**ಪಂಜಾಬಿನ ಮೇಲಿನ ಬ್ರಿಟಿಷ್ ನೇರ ಆಳ್ವಿಕೆಗೆ ವಿರೋಧ:**

- 1848ರಲ್ಲಿ ಪಂಜಾಬಿಗಳ ಈ ಪ್ರತಿಭಟನೆಗಳ ನೇತೃತ್ವವನ್ನು '**ಚಟ್ಟಾರ್ ಸಿಂಗ್ ಅಟ್ಟಾರಿವಾಲ**' ಮತ್ತು '**ಮೂಲರಾಜ್**' ಅವರು ಕ್ರಮವಾಗಿ ಲಾಹೋರ್ ಮತ್ತು ಮುಲ್ತಾನ್‌ಗಳಲ್ಲಿ ವಹಿಸಿದ್ದರು. ಪಂಜಾಬಿಗಳಿಗೆ ಸೋಲಾಯಿತು.
- ಲಾರ್ಡ್ ಡಾಲ್‌ಹೌಸಿಯು ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಂಡನು

**ಡಾಲ್ ಹೌಸಿ ಮತ್ತು ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ :**

- 1848ರಲ್ಲಿ ಭಾರತಕ್ಕೆ ಗವರ್ನರ್ ಜನರಲ್ ಆಗಿ ಬಂದನು.
- ಡಾಲ್‌ಹೌಸಿಯು ಭಾರತದ ಎಲ್ಲ ದೇಶೀಯ ಸಂಸ್ಥಾನಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸುವ ಪ್ರಯತ್ನ ಮಾಡಿದನು.
- ಡಾಲ್‌ಹೌಸಿಯು ತನ್ನ ವಿಸ್ತರಣಾ ನೀತಿಯನ್ನು '**ದತ್ತು ಮಕ್ಕಳಿಗೆ ಹಕ್ಕಿಲ್ಲ**' ಎಂಬ ನೀತಿಯ ಮೂಲಕ ಸಾಧಿಸಿದನು.

**'ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯ ಪ್ರಕಾರ:**

- 'ಯಾವನೇ ಒಬ್ಬ ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ, ಅವನು ದತ್ತು ತೆಗೆದುಕೊಂಡಿದ್ದ ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ'.
- ಅಂತಹ ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳಲಾಗುತ್ತಿತ್ತು.
- ಈ ನೀತಿಗೆ ಒಳಪಟ್ಟ ರಾಜ್ಯಗಳು ಸತಾರ, ಜೈಪುರ್, ಸಂಬಲ್‌ಪುರ್, ಉದಯಪುರ್, ಝಾನ್ಸಿ, ನಾಗಪುರ

RGA ನಾಲ್ಡೆಂಗೆಲ್ಲಿಗೆ-9739138998

## ಇತಿಹಾಸ ಅಧ್ಯಾಯ : 5 ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು

| ಕ್ರ. ಸಂ | ಸಮಾಜ ಸುಧಾರಕರು | ಕೃತಿಗಳು / ಪತ್ರಿಕೆಗಳು | ವಿಷೇಶ ಸಾಧನೆಗಳು/ ಬಿರುದುಗಳು |
|---|---|---|---|
| 1 | ರಾಜಾರಾಮ ಮೋಹನ್ ರಾಯ್ | • ಬಂಗಾಳಿ ಭಾಷಯಲ್ಲಿ 'ಸಂವಾದ ಕೌಮುದಿ' ಪತ್ರಿಕೆ ಆರಂಭಿಸಿದರು. | • 1829 ರಲ್ಲಿ ವಿಲಿಯಂ ಬೆಂಟಿಕ್ ರ ಸಹಾಯದಿಂದ 'ಸತಿ ಪದ್ಧತಿ' ಆಚರಣೆಯ ನಿಷೇಧ.<br>ಬಿರುದುಗಳು:<br>• ಆಧುನಿಕ ಭಾರತದ ಹರಿಕಾರ.<br>• ಭಾರತದ ಪುನರುಜ್ಜೀವನದ ಜನಕ.<br>• ಭಾರತೀಯ ರಾಷ್ಟ್ರೀಯತೆಯ ಪ್ರವಾದಿ |
| 2 | ದಯಾನಂದ ಸರಸ್ವತಿ | • 'ಸತ್ಯಾರ್ಥ ಪ್ರಕಾಶ' ಕೃತಿ ರಚನೆ | • ಇವರ ಘೋಷ ವಾಕ್ಯ 'ವೇದಗಳಿಗೆ ಮರಳಿ'<br>• ಶುದ್ಧಿ ಚಳುವಳಿ ಆರಂಭಿಸಿದರು.<br>• ಗೋವುಗಳ ರಕ್ಷಣೆಗಾಗಿ 'ಗೋ ರಕ್ಷಣಾ ಸಂಘ' ಸ್ಥಾಪನೆ. |
| 3 | ಜ್ಯೋತಿಭಾ ಫುಲೆ | ಗುಲಾಮಗಿರಿ ಕೃತಿ ರಚಿಸಿದರು. | ಇವರ ವಿಚಾರಗಳಿಂದ ಡಾ: ಬಿ ಆರ್ ಅಂಬೇಡ್ಕರ ಪ್ರಭಾವಿತರಾಗಿದ್ದರು. |
| 4 | ಅನಿಬೆಸೆಂಟ್ | ನ್ಯೂ ಇಂಡಿಯಾ ಮತ್ತು ಕಾಮನ್ ವ್ಹಿಲ್ ಪತ್ರಿಕೆ ಆರಂಭಿಸಿದರು. | • ಥಿಯೋಸಾಫಿಕಲ್ ಸೊಸೈಟಿಯ ಚಟುವಟಿಕೆ ಮುಂದುವರೆಸಿದರು.<br>• ಬಗವದ್ಗೀತೆ ಯನ್ನು ಇಂಗ್ಲಿಷಗೆ ಅನುವಾದಿಸಿ 'ಶ್ವೇತ ಸರಸ್ವತಿ' ಎನಿಸಿಕೊಂಡರು.<br>• 1898 ರಲ್ಲಿ ಸೆಂಟ್ರಲ್ ಹಿಂದೂ ಕಾಲೇಜ್ ಸ್ಥಾಪನೆ (ಬನಾರಸ ಹಿಂದೂ ವಿಶ್ವ ವಿದ್ಯಾಲಯ)<br>• ಹೋಂ ರೋಲ್ ಚಳುವಳಿ ಆರಂಭಿಸಿದರು |

| ಕ್ರ. ಸಂ | ಸಮಾಜ/ ಚಳುವಳಿ ಸಂಘ | ಸ್ಥಾಪಕರು/ ಸಂಘಟಕರು | ವರ್ಷ | ಸುಧಾರಣೆಗಳು/ಉದ್ದೇಶಗಳು/ಬೋಧನೆಗಳು/ಕೊಡುಗೆಗಳು | |
|---|---|---|---|---|---|
| | | | | ಖಂಡನೆಗಳು/ ಪ್ರತಿರೋಧಗಳು | ಪ್ರತಿಪಾಧನೆಗಳು |
| 1 | ಬ್ರಹ್ಮ ಸಮಾಜ | ರಾಜಾರಾಮ ಮೋಹನ್ ರಾಯ್ | 1828 | • ಅರ್ಥಹೀನ ಆಚರಣೆ<br>• ಬಹುಪತ್ನಿತ್ವ ಪದ್ಧತಿ<br>• ಬಾಲ್ಯವಿವಾಹ | • ಏಕದೇವತಾರಾಧನೆ<br>• ವ್ಯಕ್ತಿಯು ಘನತೆಯಿಂದ ಬಾಳಬೇಕು.<br>• ವಿಧವೆಯರಿಗೆ ಆಸ್ತಿಯಲ್ಲಿ ಪಾಲು.<br>• ಒಳ್ಳೆಯದು ಎಲ್ಲಿದ್ದರೂ ಅದನ್ನು ಸ್ವೀಕರಿಸುವದು.<br>• ಒಳ್ಳೆಯದು ಎಲ್ಲಿದ್ದರೂ ಅದನ್ನು ಸ್ವೀಕರಿಸಬಹುದು.<br>• ಪಶ್ಚಿಮದ ಆಲೋಚನಾ ಕ್ರಮ |
| 2 | ಯುವ | ಹೆನ್ರಿ | 1809 | • ಮೂಢನಂಬಿಕೆಗಳು | • ವೈಜ್ಞಾನಿಕ ಆಲೋಚನಾ ಕ್ರಮ |

RGA ಸುಲಭಸಾಧನೆ-9739138998

| | | | | | |
|---|---|---|---|---|---|
| | ಬಂಗಾಳಿ ಚಳುವಳಿ | ವಿವಿಯನ್ ಡಿರೇಜಿಯೋ | | • ಮಹಿಳಾ ಜಾತಿ ಪ್ರೇರಿತ ಶೋಷಣೆ. | • ಪ್ರಶ್ನಿಸುವ, ವೈಜ್ಞಾನಿಕ ದೃಷ್ಟಿಕೋನವನ್ನು ಮೈಗೂಡಿಸಿಲು ಹೊಸ ಪಠ್ಯ ಪುಸ್ತಕ<br>• ಪ್ರಕೃತಿ, ಮಾನವೀಯತೆ, ದೇವರು ಮುಂತಾದ ವಿಷಯಗಳ ಕುರಿತು ಚರ್ಚೆ ಮತ್ತು ಸಂವಾದಗಳನ್ನು ನಡೆಸುವದು. |
| 3 | ಆರ್ಯ ಸಮಾಜ | ದಯಾನಂದ ಸರಸ್ವತಿ | 1824 | • ಜಾತಿ ಆಧಾರ.<br>• ಬಹುಪತ್ನಿತ್ವ<br>• ಬಾಲ್ಯವಿವಾಹ. | • ಸಮಸ್ಯೆಗಳಿಗೆ ಪರಿಹಾರಗಳು ವೇದಗಳಲ್ಲಿವೆ.<br>• **'ವೇದಗಳಿಗೆ ಮರಳಿ ಎಂದರು.**<br>• ವೇದಗಳು ಮಾತ್ರ ಪ್ರಮಾಣೀಕೃತ<br>• **ಒಬ್ಬನೇ ದೇವರಲ್ಲಿ** ನಂಬಿಕೆಯಿಡಬೇಕು.<br>• ಅಂತರ್ಜಾತಿ ವಿವಾಹ.<br>• ಸ್ತ್ರೀ ಮತ್ತು ಪುರುಷರು ಸಮಾನರು.<br>• ವೇದಗಳು ಮಾತ್ರ ಶ್ರೇಷ್ಠ.<br>• ಪ್ರಾಚೀನ ಪವಿತ್ರ ಗ್ರಂಥಗಳನ್ನು ಅಧ್ಯಯನ ಮಾಡಬೇಕು ಮತ್ತು ಬೋಧಿಸಬೇಕು. |
| 4 | ಪ್ರರ್ಥನಾ ಸಮಾಜ | ಡಾ: ಆತ್ಮಾರಾಮ ಪಾಂಡುರಂಗ | 1873 | • ಬಾಲ್ಯವಿವಾಹ,<br>• ವಿಧವೆಯರನ್ನು ತಿರಸ್ಕಾರ ಬದಕು. | • ಪಶ್ಚಿಮದ ಆಧುನಿಕ ಆಲೋಚನೆಗಳು.<br>• ಹಿಂದೂ ಧರ್ಮದ ಪುನರ್ ವಿಮರ್ಷೆ.<br>• ಸ್ತ್ರೀಯರ ಶಿಕ್ಷಣ, ನಿರ್ಗತಿಕರಿಗೆ ಬದುಕುವ ಆಸರೆಯನ್ನು ಕಲ್ಪಿಸುವುದು.<br>• ಉನ್ನತಜಾತಿಗಳಲ್ಲಿನ ವಿವಾಹದಲ್ಲಿ ಸುಧಾರಣೆ.<br>• ವಿದವೆಯರ ಪುನರ್‌ವಿವಾಹ<br>• ಇದಕ್ಕಾಗಿ ಬ್ರಿಟಿಷ್ ಸರಕಾರದ ನೆರವನ್ನು ಪಡೆದರು |

| ಕ್ರ. ಸಂ | ಸಮಾಜ/ ಚಳುವಳಿ ಸಂಘ | ಸ್ಥಾಪಕರು/ ಸಂಘಟಕರು | ವರ್ಷ | ಸುಧಾರಣೆಗಳು/ಉದ್ದೇಶಗಳು/ಬೋಧನೆಗಳು/ಕೊಡುಗೆಗಳು | |
|---|---|---|---|---|---|
| | | | | ಖಂಡನೆಗಳು/ ಪ್ರತಿರೋಧಗಳು | ಪ್ರತಿಪಾಧನೆಗಳು |
| 5 | ಅಲಿಘರ್ ಚಳುವಳಿ | ಸರ್ ಸಯ್ಯದ್ ಅಹಮ್ಮದ್ ಖಾನ್ | 1863 | • ಸಂಪ್ರದಾಯ,<br>• ಮೌಢ್ಯಗಳು,<br>• ಅಜ್ಞಾನ<br>• ಅವೈಜ್ಞಾನಿಕ ಮನೋಧರ್ಮ.<br>• **ಪರದಾಪದ್ಧತಿ**<br>• ಬಹುಪತ್ನಿತ್ವ ಪದ್ಧತಿ. | • ಕುರಾನ್ ಗ್ರಂಥವು ಮಾತ್ರ ಪ್ರಮಾಣೀಕೃತ.<br>• ಇಸ್ಲಾಂನ್ನು ಕುರಿತಾದ ಇತರ ಬರಹಗಳು ಆನುಷಂಗಿಕ.<br>• ಕಾಲ ಬದಲಾದಂತೆ ಧರ್ಮವನ್ನು ಅರ್ಥೈಸಿಕೊಳ್ಳುವ ಮತ್ತು ಪರಿಭಾವಿಸುವ ರೀತಿಯೂ ಬದಲಾಗಬೇಕು,<br>• ತೆರೆದ ಮನಸ್ಸು ಇಲ್ಲದಿದ್ದರೆ ಯಾವ ಸಾಮಾಜಿಕ ಮತ್ತು ಬೌದ್ಧಿಕ ಪ್ರಗತಿ ಸಾಧ್ಯವಿಲ್ಲವೆಂದರು.<br>• ಮುಸ್ಲಿಂ ಹೆಣ್ಣು ಮಕ್ಕಳು ವಿದ್ಯಾವಂತರಾಗಬೇಕು ಎಂದು ಸಾರಿದರು. |
| 6 | ರಾಮಕೃಷ್ಣ | ಸ್ವಾಮಿ | 1897 | • ಜಾತಿವ್ಯವಸ್ಥೆ , | • ಭಾರತದ ದಾರ್ಶನಿಕತೆಯ ವಿವಿಧ ದೃಷ್ಟಿಕೋನಗಳನ್ನು |

| | | | | | |
|---|---|---|---|---|---|
| | ಮಿಷನ್ (ಮಠ) | ವಿವೇಕಾನಂದ | | • ಬಡತನ,<br>• ಅನಕ್ಷರತೆ,<br>• ಅಜ್ಞಾನ<br>• ಶೋಷಣೆ ಮುಕ್ತ<br>• ಪಾಶ್ಚಿಮಾತ್ಯರ ಅಂಧಾನುಕರಣೆ. | ಭಾರತೀಯರಿಗೆ ಮತ್ತು ಪಾಶ್ಚಿಮಾತ್ಯರಿಗೆ ತಿಳಿಸುವ ಕೆಲಸ.<br>• ಜನರು ವಿದ್ಯಾವಂತರಾದಾಗ ಸುಧಾರಣೆ ಸಾಧ್ಯ.<br>• ಶಾಸನ ರೂಪಿಸುವ ಸಂಸ್ಥೆಗಳು ರೂಪುಗೊಳ್ಳಬೇಕು.<br>• ಸಮಾಜ ಸುಧಾರಣಾ ಕಾನೂನುಗಳು ಜಾರಿಗೊಳ್ಳಬೇಕು.<br>• ಭಾರತದ ಸಮಾಜ ಶೋಷಣೆ ಮುಕ್ತವಾಗಬೇಕು.<br>• ಧರ್ಮದ ಕರ್ತವ್ಯವೆಂದರೆ ಕತ್ತಲಲ್ಲಿರುವವರಿಗೆ ಬೆಳಕನ್ನು ನೀಡಬೇಕು.<br>• ಯಾರ ಆತ್ಮ ಬಡವರಿಗಾಗಿ ಮಿಡಿಯುವುದೋ ಅವನೇ ಮಹಾತ್ಮ. ಇಲ್ಲದಿದ್ದರೆ ಅವನು ದುರಾತ್ಮ ಎಂದರು. |
| 7 | **ಥಿಯೋಸಾಫಿಕಲ್ ಸೊಸೈಟಿ** | **ಬ್ಲವಟಾಟ್ ಸ್ಕೆ ಮತ್ತು ಎಚ್ ಎಸ್ ಅಲ್ಕಾಟ್** | **1886** | • ಧರ್ಮಗಳು, ದರ್ಶನಗಳ ಮತ್ತು ವಿಜ್ಞಾನಗಳ ತುಲನಾತ್ಮಕ ಅಧ್ಯಯನ.<br>• ಮನುಷ್ಯನ ಅದಮ್ಯ ಚೇತನ ಶಕ್ತಿಯನ್ನು ಕಂಡುಕೊಳ್ಳುವದು.<br>• 'ವಿಶ್ವಭ್ರಾತೃತ್ವ' ಪ್ರಜ್ಞೆ ಘೋಷಣೆ.<br>• ವೇದಗಳು, ಉಪನಿಷತ್ತುಗಳು, ಸಾಂಖ್ಯಯೋಗ ಮತ್ತು ವೇದಾಂತ ತಾತ್ವಿಕ ಚಿಂತನೆಗಳ ಪ್ರಚಾರ.<br>• ಭಾರತದ ಧಾರ್ಮಿಕ ಮತ್ತು ತಾತ್ವಿಕ ಅಥವಾ ದಾರ್ಶನಿಕ ಪರಂಪರೆಗಳನ್ನು ಅಧ್ಯಯನ.<br>• **ಹಿಂದೂ ಧರ್ಮದ ಪುನರುತ್ಥಾನ ಚಳವಳಿ** ಎಂದು ಕರೆಯಲಾಗಿದೆ. | |
| 8 | **ಧರ್ಮ ಪರಿಪಾಲನಾ ಯೋಗಂ** | **ನಾರಾಯಣ ಗುರು** | **1903** | • ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಮತ್ತು ಒಬ್ಬನೇ ದೇವರು ಎಂಬುದು.<br>• ಕೆಳಸಮುದಾಯಗಳಿಗೆ ದೇವಾಲಯಗಳನ್ನು ಕಟ್ಟಿದರು.<br>• **ವೈಕಂ ಸತ್ಯಾಗ್ರಹ ದೇವಾಲಯ ಪ್ರವೇಶ ಚಳವಳಿ**<br>• **ಗುರುವಾಯೂರು ದೇವಸ್ಥಾನ ಪ್ರವೇಶ** ಚಳವಳಿ. | |
| **ಕ್ರ. ಸಂ** | **ಸಮಾಜ/ ಚಳುವಳಿ ಸಂಘ** | **ಸ್ಥಾಪಕರು/ ಸಂಘಟಕರು** | **ವರ್ಷ** | **ಸುಧಾರಣೆಗಳು/ಉದ್ದೇಶಗಳು/ಬೋಧನೆಗಳು/ಕೊಡುಗೆಗಳು** | |
| | | | | **ಖಂಡನೆಗಳು/ ಪ್ರತಿರೋಧಗಳು** | **ಪ್ರತಿಪಾಧನೆಗಳು** |
| 9 | **ಪೆರಿಯಾರ ಚಳುವಳಿ** | **ರಾಮಸ್ವಾಮಿ (ಪೆರಿಯಾರ್)** | **1926** | • ಜನಾಂಗೀಯ ಶ್ರೇಷ್ಠತೆ.<br>• **ಸಂಸ್ಕೃತ ಭಾಷೆ ಮತ್ತು ಸಾಹಿತ್ಯ**<br>• ರಾಮನನ್ನು ತಿರಸ್ಕರಿಸಿದರು<br>• ಜಾತಿ ಮತ್ತು ಲಿಂಗ ತಾರಮ್ಯ | • **ಜನಾಂಗೀಯ ಪರಿಕಲ್ಪನೆಯ ದ್ರಾವಿಡ ಚಳವಳಿ ಆರಂಭಿಸಿದರು.**<br>• ತಮಿಳು ಭಾಷೆಯನ್ನು ದ್ರಾವಿಡರ ಭಾಷೆ.<br>• ರಾಮಾಯಣ ಮಹಾಕಾವ್ಯದ **ರಾವಣ ದ್ರಾವಿಡರ ನಾಯಕ.**<br>• **ರಾವಣ ಪರಂಪರೆಯನ್ನು** ವೈಭವೀಕಕರಣ<br>• ಸಮಾನತೆಯ ಆಶಯವನ್ನು ಎತ್ತಿಹಿಡಿದರು. |
| 10 | **ಸತ್ಯಶೋಧಕ ಸಮಾಜ** | **ಮಹಾತ್ಮ ಜ್ಯೋತಿಭಾ** | **1873** | • ಶೂದ್ರರಿಗೆ ಮತ್ತು ಹೆಣ್ಣುಮಕ್ಕಳಿಗೆ ವಿದ್ಯೆ | |

| | | | | |
|---|---|---|---|---|
| | | ಫುಲೆ | | • ಶಾಲೆಗಳನ್ನು ತೆರೆದರು.<br>• ತಮ್ಮ ಬಾವಿಯಲ್ಲಿ ಎಲ್ಲ ಜಾತಿಯವರಿಗೆ ನೀರು ಸೇದಿಕೊಳ್ಳಲು ಅವಕಾಶ.<br>• ಹೆಣ್ಣುಮಕ್ಕಳಿಗೆ ವಸತಿ ನಿಲಯವನ್ನು ಸ್ಥಾಪಿನೆ. |

## ಇತಿಹಾಸ ಅಧ್ಯಾಯ : 6 ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857) (3 ಅಂಕಗಳು)

### ಅತಿ ಕಿರು ಮತ್ತು ಕಿರು ಉತ್ತರಗಳಿಗಾಗಿ ಮುಖ್ಯಾಂಶಗಳು:

- ಭಾರತದಲ್ಲಿ ಇಂಗ್ಲಿಷರು ಅಧಿಕಾರ ವಿಸ್ತರಣೆ ಉದ್ದೇಶದಿಂದ **ಸಹಾಯಕ ಸೈನ್ಯ ಪದ್ಧತಿ** ಮತ್ತು **ದತ್ತು ಮಕ್ಕಳಿಗೆ ಹಕ್ಕಿಲ್ಲ** ಎಂಬ ನೀತಿಗಳನ್ನು ಜಾರಿಗೆ ತಂದಿದ್ದರು.
- 1857ರ ಮಹಾಪ್ರತಿಭಟನೆಯನ್ನು ಕೆಲವು ಭಾರತೀಯ ಇತಿಹಾಸಕಾರರು '**ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ**' ಎಂದು ಕರೆದರು.
- ಇಂಗ್ಲಿಷ್ ಇತಿಹಾಸಕಾರರು ಇದೊಂದು '**ಸಿಪಾಯಿ ದಂಗೆ**' ಮಾತ್ರ ಎಂದಿದ್ದಾರೆ.

**ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣಗಳು:**

**1.ರಾಜಕೀಯ ಕಾರಣಗಳು:**

- '**ದತ್ತು ಮಕ್ಕಳಿಗೆ ಹಕ್ಕಿಲ್ಲ**' ಎಂಬ ನೀತಿ.
- **ಸತಾರ, ಜೈಪುರ, ಝಾನ್ಸಿ, ಉದಯಪುರ** ಬ್ರಿಟಿಷರ ವಶವಾದವು.
- **ತಂಜಾವೂರು ಮತ್ತು ಕರ್ನಾಟಿಕ್ ನವಾಬರಿಗಿದ್ದ** ರಾಜ ಪದವಿಗಳನ್ನು ರದ್ದುಪಡಿಸಿದನು.
- **ಮೊಘಲ್ ಚಕ್ರವರ್ತಿ, ಔದ್‌ನ ನವಾಬ** ಇಂಗ್ಲಿಷರು ಅಧಿಕಾರದಿಂದ ಪದಚ್ಯುತಗೊಳಿಸಿದರು.
- ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು.

**1. ಆರ್ಥಿಕ ಕಾರಣಗಳು:**

- ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿಯಿಂದ ಭಾರತದ ಮೇಲಾದ ಪರಿಣಾಮಗಳು–
  - ✓ ಕರಕುಶಲತೆ, ದೇಶೀಯ ಕೈಗಾರಿಕೆಗಳು ಕ್ಷೀಣಿಸಿದವು.
  - ✓ ಕರಕುಶಲಗಾರರು ನಿರುದ್ಯೋಗಿಗಳಾದರು.
  - ✓ ಬಟ್ಟೆ ಮತ್ತು ಉಣ್ಣೆ ಕೈಗಾರಿಕೆಗಳು ಅವನತಿ ಹೊಂದಿದವು.
  - ✓ ಗೃಹಕೈಗಾರಿಕೆಗಳು ಆರ್ಥಿಕನಷ್ಟ ಅನುಭವಿಸಿದವು.
  - ✓ ಇಂಗ್ಲೆಂಡಿನಲ್ಲಿ ಭಾರತದ ವಸ್ತುಗಳು ದುಬಾರಿಯಾದವು.
- ಕಂದಾಯ ವಸೂಲಿ ಹಕ್ಕನ್ನು ಹಿಂಪಡೆದರು.
- ಇನಾಂ ಭೂಮಿಯನ್ನು ವಾಪಸ್ ಪಡೆಯಲಾಯಿತು.
- ಕೃಷಿಕರು ಆರ್ಥಿಕಸಂಕಷ್ಟ ಅನುಭವಿಸಿದರು.

**3. ಆಡಳಿತಾತ್ಮಕ ಕಾರಣಗಳು:**

- **ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳನ್ನು ಜಾರಿ.**
- ಕಾನೂನಿನಲ್ಲಿ **ಪಕ್ಷಪಾತವಿತ್ತು.**
- **ಭಾರತೀಯರಿಗೆ ಪ್ರತ್ಯೇಕ ನಿಯಮಗಳು** ಅನ್ವಯ.
- **ಆಂಗ್ಲ ಭಾಷೆಯು** ನ್ಯಾಯಾಲಯದ ಭಾಷೆಯಾಯಿತು.
- **ಇಂಗ್ಲಿಷರ ಪರವಾಗಿ ನ್ಯಾಯದಾನ.**
- ಹೊಸ ಕಾನೂನಿನ ಆಶಯಗಳು ಜನರಿಗೆ ಅರಿವಾಗಲಿಲ್ಲ.

**1. ಸೈನಿಕ ಕಾರಣಗಳು:**

- ಭಾರತೀಯ ಸಿಪಾಯಿಗಳ **ಸ್ಥಿತಿಯು ಗಂಭೀರವಾಗಿತ್ತು.**
- ಆಂಗ್ಲ ಸೈನಿಕರಿಗಿದ್ದ **ಸ್ಥಾನಮಾನ, ವೇತನ, ಬಡ್ತಿ ಅವಕಾಶಗಳು** ಭಾರತೀಯ ಸಿಪಾಯಿಗಳಿಗೆ ಇರಲಿಲ್ಲ.
- ಭಾರತೀಯ ಸೈನಿಕರನ್ನು **ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು.**

**2. ದಂಗೆಯ ತಕ್ಷಣದ ಕಾರಣ:**

- ಭಾರತೀಯ ಸಿಪಾಯಿಗಳ ಒಂದಾಗಿ ಹೋರಾಡುವ ಆತ್ಮವಿಶ್ವಾಸ.
- ಇಂಗ್ಲಿಷರನ್ನು ಭಾರತದಿಂದ ಓಡಿಸುವ ಭಾವನೆ.
- ಸೈನಿಕರಿಗೆ '**ರಾಯಲ್ ಎನ್‌ಫೀಲ್ಡ್** ಎಂಬ **ನವೀನ ಬಂದೂಕುಗಳನ್ನು** ನೀಡಿದ್ದು.
- **ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು** ಸವರಿದ್ದಾರೆಂಬ ವದಂತಿ.
- ಹಿಂದುಗಳಿಗೆ ಹಸು ಪವಿತ್ರವಾದರೆ, ಮುಸ್ಲಿಮರಿಗೆ ಹಂದಿಯು ನಿಷಿದ್ಧವಾಗಿತ್ತು.
- ಬ್ಯಾರಕ್‌ಪುರದ ಸೈನಿಕರು ಬಂಡಾಯವೆದ್ದರು.

RGA ಸುಲಭ ಆಹೇರಿ-9739138998

- **ಮಂಗಲ ಪಾಂಡೆ** ಬ್ರಿಟಿಷ್ ಸೈನ್ಯದ ಅಧಿಕಾರಿಯನ್ನು ಕೊಂದನು.

1. **ಝಾನ್ಸಿ ದಂಗೆ:**

- ರಾಣಿ ಲಕ್ಷ್ಮಿಬಾಯಿಯ ನಾಯಕತ್ವದಲ್ಲಿ ದಂಗೆ.
- **ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯ ವಿರುದ್ಧ.**
- ಇಂಗ್ಲಿಷರ ವಿರುದ್ಧ ಯುದ್ಧ ಸಾರಿದಳು.
- ಗ್ವಾಲಿಯರ್‌ನ್ನು ವಶಕ್ಕೆ ಪಡೆದಳು.
- ತಾತ್ಯಾಟೋಪೆಯು ರಾಣಿಯ ಸಹಾಯ ನೀಡಿದ.
- ಶೌರ್ಯದಿಂದ ಹೋರಾಡಿ ರಾಣಿಯು ಅಸುನೀಗಿದಳು.
- ರಾಣಿಯು ಸ್ವಾತಂತ್ರ್ಯ ಸಂಗ್ರಾಮ ಇತಿಹಾಸದಲ್ಲಿ ಹೆಮ್ಮೆಯ ಸ್ಥಾನವನ್ನು ಹೊಂದಿದ್ದಾಳೆ.

**1857ರ ದಂಗೆಯ ವಿಫಲತೆಗೆ ಕಾರಣಗಳು :**

- ರಾಜರ/ರಾಣಿಯರ ಸ್ವಹಿತಾಸಕ್ತಿ ಹಾಗೂ ಹಕ್ಕುಗಳಿಗಾಗಿ ನಡೆದಿತ್ತು.
- ಯೋಜಿತ ದಂಗೆಯಾಗಿರಲಿಲ್ಲ.
- ಬ್ರಿಟಿಷ್ ಸೈನಿಕರ ಒಗಟ್ಟು.
- ಭಾರತೀಯ ಸೈನಿಕರಲ್ಲಿದ್ದ ಭಿನ್ನತೆ.
- ವ್ಯವಸ್ಥಿತ ಸಂಘಟನೆಯ ಕೊರತೆ.
- ಭಾರತೀಯರಲ್ಲಿ ಯುದ್ಧ ತಂತ್ರ, ಸೈನಿಕ ಪರಿಣತಿ, ಇರಲಿಲ್ಲ
- ಸೂಕ್ತ ಸೇನಾ ನಾಯಕತ್ವ ಮತ್ತು ಶಿಸ್ತು ಕೊರತೆ ಇತ್ತು,
- ದೇಶೀಯ ಸಂಸ್ಥಾನಗಳ ರಾಜರು ಬ್ರಿಟಿಷರಿಗೆ ತೋರಿದ ನಿಷ್ಠೆ.
- ಸಿಪಾಯಿಗಳು ಲೂಟಿ, ದರೋಡೆ ಮಾಡಿ ಜನರ ವಿಶ್ವಾಸ ಕಳೆದುಕೊಂಡರು.

**1857ರ ದಂಗೆಯ ಪರಿಣಾಮಗಳು :**

- ಕಂಪನಿಯ ಆಡಳಿತ ಕೊನೆಗೊಂಡಿತು.
- ಬ್ರಿಟನ್ ಸಾಮ್ರಾಜ್ಞಿಗೆ ಆಡಳಿತ ವರ್ಗಾವಣೆ.
- ಭಾರತದ ವ್ಯವಹಾರವನ್ನು **ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ** ಒಪ್ಪಿಸಲಾಯಿತು.
- 1858ರಲ್ಲಿ ಬ್ರಿಟನ್ ರಾಣಿಯು ಒಂದು ಘೋಷಣೆ ಹೊರಡಿಸಿದರು.
  - ✓ ಕಂಪನಿಯು ದೇಶೀ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನು ಅಂಗೀಕರಿಸಲಾಯಿತು.
  - ✓ ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈಬಿಡುವುದು.
  - ✓ ಭಾರತೀಯರಿಗೆ ಸುಭದ್ರ ಸರ್ಕಾರವನ್ನು ನೀಡುವುದು.
  - ✓ ಕಾನೂನಿನ ಮುಂದೆ ಸಮಾನತೆ.
  - ✓ ಧಾರ್ಮಿಕ ಸಹಿಷ್ಣುತೆಯೊಂದಿಗೆ ಭಾರತೀಯರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ.
- ಸ್ವಾತಂತ್ರ್ಯ ಹೋರಾಟಕ್ಕೆ ದಿಕ್ಸೂಚಿಯಾಯಿತು.
- ಹೋರಾಟದ ಪರ್ಯಾಯ ಮಾರ್ಗ ಹುಡುಕುವ ಅನಿವಾರ್ಯತೆ.

## ರಾಜ್ಯಶಾಸ್ತ್ರ ಅಧ್ಯಾಯ – 2 ಭಾರತದ ವಿದೇಶಾಂಗ ನೀತಿ

**ವಿದೇಶಾಂಗ ನೀತಿ ಅರ್ಥ:**

- ಒಂದು ರಾಷ್ಟ್ರವು ಅನ್ಯರಾಷ್ಟ್ರಗಳೊಡನೆ ವ್ಯವಹರಿಸುವಾಗ ಅನುಸರಿಸುವ ನೀತಿ.

**ಸಾರ್ವಭೌಮ ಅಥವಾ ಪರಮಾಧಿಕಾರ ರಾಷ್ಟ್ರದ ಅರ್ಥ:**

- ಒಂದು ರಾಷ್ಟ್ರ ಯಾವುದೇ ಬಗೆಯಲ್ಲಿ ಆಂತರಿಕವಾಗಲೀ, ಬಾಹ್ಯವಾಗಿಯಾಗಲಿ ಇತರೆ ರಾಷ್ಟ್ರಗಳಿಗೆ ಅಧೀನವಾಗಿರದೆ ಸ್ವತಂತ್ರವಾಗಿರುವುದು.

**ಭಾರತದ ವಿದೇಶಾಂಗ ನೀತಿಯ ಪ್ರಮುಖ ಉದ್ದೇಶಗಳು:**

- ರಾಷ್ಟ್ರದ ಭದ್ರತೆ.
- ರಾಷ್ಟ್ರದ ಆರ್ಥಿಕ ಸಂವರ್ಧನೆ.
- ಸಾಂಸ್ಕೃತಿಕ ಮೌಲ್ಯಗಳನ್ನು ಬೇರೆ ದೇಶದಲ್ಲಿ ಬಿತ್ತರಿಸುವುದು.
- ಮಿತ್ರ ರಾಷ್ಟ್ರಗಳನ್ನು ಹೆಚ್ಚಿಸಿಕೊಳ್ಳುವದು.
- ವಿರೋಧಿ ರಾಷ್ಟ್ರಗಳನ್ನು ನಿರ್ಬಂಧಿಸುವುದು
- ವಿಶ್ವಶಾಂತಿ ಹಾಗೂ ಸಹಬಾಳ್ವೆಯನ್ನು ಸಾಧಿಸುವುದು.

**ಭಾರತೀಯ ವಿದೇಶಾಂಗ ನೀತಿಯ ಪ್ರಭಾವ ಬೀರುವ ಅಂಶಗಳು ಅಥವಾ ಅಡಕವಾಗಿರುವ ಅಂಶಗಳು:**

- ರಾಷ್ಟ್ರೀಯ ಹಿತಾಸಕ್ತಿಗಳು.
- ಭೌಗೋಳಿಕ ಅಂಶಗಳು,
- ರಾಜಕೀಯ ಪರಿಸ್ಥಿತಿ,
- ಆರ್ಥಿಕ ವ್ಯವಸ್ಥೆ,
- ರಕ್ಷಣಾ ಸಾಮರ್ಥ್ಯ,
- ಜನಾಭಿಪ್ರಾಯ,

RGA ಸುಲಭ ಸಿರಿ-9739138998

- ಅಂತರರಾಷ್ಟ್ರೀಯ ಪರಿಸರ.

**ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳು:**

1. ಪಂಚಶೀಲ ತತ್ವಗಳು.
2. ಭಾರತದ ಅಲಿಪ್ತ ನೀತಿ.
3. ವಸಾಹತುಶಾಹಿತ್ವಕ್ಕೆ ವಿರೋಧ
4. ವರ್ಣಭೇದ ನೀತಿಗೆ ವಿರೋಧ
5. ನಿಶ್ಯಸ್ತ್ರೀಕರಣ.

**1. ಪಂಚಶೀಲ ತತ್ವಗಳು :**

- 1954ರ ಚೀನಾದ ಪ್ರಧಾನಿ ಚೌ.ಎನ್. ಲಾಯ್ ಮತ್ತು ಭಾರತದ ಪ್ರಧಾನಿ ಜವಾಹರಲಾಲ್ ನೆಹರೂ ನಡುವೆ.
- ಪಂಚಶೀಲ ತತ್ವಗಳು, ಅವುಗಳೆಂದರೆ,
  1. ಪರಸ್ಪರ ರಾಷ್ಟ್ರಗಳ ಪ್ರಾದೇಶಿಕ ಹಾಗೂ ಸಾರ್ವಭೌಮತೆಗೆ ಗೌರವ.
  2. ಪರಸ್ಪರ ಆಕ್ರಮಣ ಮಾಡದಿರುವುದು.
  3. ಆಂತರಿಕ ವ್ಯವಹಾರಗಳಲ್ಲಿ ಪರಸ್ಪರ ಹಸ್ತಕ್ಷೇಪ ಮಾಡದಿರುವುದು
  4. ಪರಸ್ಪರ ಸಹಕಾರ ಮತ್ತು ಸಮಾನತೆ
  5. ಶಾಂತಿಯುತ ಸಹಬಾಳ್ವೆ. ಇವು **ನಮ್ಮ ದೇಶದ ವಿದೇಶಾಂಗ ನೀತಿಯ ತಳಹದಿ** ಎನ್ನಬಹುದಾಗಿದೆ.

**1. ಅಲಿಪ್ತ ನೀತಿ :**

- ವಿಶ್ವವು ಎರಡು ಶಕ್ತಿ ಬಣಗಳಾಗಿ ವಿಭಾಗ.
- **ಅಮೆರಿಕಾ** ನೇತೃತ್ವದ ಪ್ರಜಾಪ್ರಭುತ್ವ ಬಣ
- **ರಷ್ಯಾ** ಹಿರಿತನದ ಕಮ್ಯುನಿಸ್ಟ್ ಬಣ.
- ಭಾರತವು ಯಾವ ಶಕ್ತಿ ಬಣಕ್ಕೂ ಸೇರದೆ ತಟಸ್ಥವಾಯಿತು.
- ಅಮೆರಿಕಾದಿಂದ ಆರ್ಥಿಕ ನೆರವನ್ನು
- ರಷ್ಯಾದಿಂದ ಭದ್ರಾತಾ ನೆರವನ್ನು ಪಡೆಯಿತು.
- ವಿಶ್ವದ ಪ್ರತಿಯೊಂದು ವಿದ್ಯಮಾನಗಳ ಗುಣ–ದೋಷಗಳ ಸ್ವಾಗತಿಸುವ ಅಥವಾ ವಿರೋಧಿಸುವ ಸ್ವತಂತ್ರ್ಯವನ್ನು ಪಡೆಯಿತು.
- ಇದನ್ನು ಭಾರತದ **ಅಲಿಪ್ತ ನೀತಿ** ಎನ್ನುವರು.
- ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ಇಂದಿರಾಗಾಂಧಿಯವರು **ಸವಾಲಿಗೆ ಸವಾಲಿನ ವಿದೇಶಾಂಗ ನೀತಿಯನ್ನು** ಅನುಸರಿಸಿದರು.

**3. ವಸಾಹತುಶಾಹಿತ್ವಕ್ಕೆ ವಿರೋಧ :**

- ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಆ ದೇಶದ ಸಾರ್ವಭೌಮತ್ವವನ್ನು ಹತ್ತಿಕ್ಕಿ ಸ್ವಾರ್ಥಕ್ಕಾಗಿ ದುರುಪಯೋಗ ಪಡಿಸಿಕೊಳ್ಳುವುದಕ್ಕೆ ವಸಾಹತು ಶಾಹಿತ್ವ ಎಂದು ಕರೆಯುತ್ತಾರೆ.
- ಭಾರತ ಪ್ರಪಂಚದ ಯಾವುದೇ ಮೂಲೆಯಲ್ಲಿ ವಸಾಹತು ಶಾಹಿತ್ವ ಇರಕೂಡದು ಭಾರತ ತನ್ನ ನಿಲುವು ಪ್ರತಿಪಾಧಿಸಿತು.

**2. ವರ್ಣಭೇದ ನೀತಿಗೆ ವಿರೋಧ :**

- ಒಂದು ಜನಾಂಗದ ಅಥವಾ ವರ್ಣದ ಜನಸಮುದಾಯ ಇನ್ನೊಂದು ಜನಾಂಗ ಅಥವಾ ವರ್ಣದ ಜನಸಮುದಾಯವನ್ನು ತಮಗಿಂತ ಕೀಳು ಎಂದು ಭಾವಿಸಿ ಅವರನ್ನು ಕಡೆಗಣಿಸುವ ಅಥವಾ ವಿರೋಧಿಸುವ ನೀತಿಗೆ **ವರ್ಣಭೇದ ನೀತಿ** ಎಂದು ಕರೆಯಲಾಗುವುದು.
- ಈ ನೀತಿಯು ಅಮಾನವೀಯ ಮತ್ತು ಮಾನವ ಹಕ್ಕುಗಳನ್ನು ಉಲ್ಲಂಘಿಸಿ ವಿಶ್ವಶಾಂತಿ ಮತ್ತು ಸಹಬಾಳ್ವೆಗೆ ಮಾರಕವಾಗುತ್ತದೆ.
- ವರ್ಣಭೇದ ನೀತಿಯನ್ನು ಭಾರತ ವಿರೋಧಿಸುತ್ತದೆ.

**3. ನಿಶ್ಯಸ್ತ್ರೀಕರಣ :**

- ಕೆಲವು ನಿರ್ದಿಷ್ಟ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತಹಂತವಾಗಿ ಇಲ್ಲವಾಗಿಸುವುದೇ ನಿಶ್ಯಸ್ತ್ರೀಕರಣ.
- ಶಸ್ತ್ರಾಸ್ತ್ರಗಳ ಉತ್ಪಾದನೆ, ಮಾರಾಟ, ಸಂಗ್ರಹಣೆಯಲ್ಲಿ ಭಾರಿ ಪೈಪೋಟಿನಡೆದಿದೆ.
- ಗುಣಾತ್ಮಕ ಹಾಗೂ ಗಾತ್ರದ ಪರಿಮಿತಿಯಲ್ಲಿನ ನಿಶ್ಯಸ್ತ್ರೀಕರಣವನ್ನು ಪ್ರತಿಪಾದನೆ.

**'ಸಂಪೂರ್ಣ ನಿಶ್ಯಸ್ತ್ರೀಕರಣ ಸಾಧ್ಯವಾಗದ ವಿಚಾರವಾಗಿದ್ದರೂ ಭಾರತ ವಿಶೇಷವಾಗಿ ಒತ್ತು ನೀಡುತ್ತಿದೆ.' ಸಮರ್ಥನೆ:**

- ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ರಕ್ಷಣಾವ್ಯೂಹ ಅತ್ಯಗತ್ಯ.
- ಭಾರತ **ವಿಶ್ವಶಾಂತಿ ಹಾಗೂ ಸಹಬಾಳ್ವೆಗೆ** ಪೂರಕವಾದ ವಿದೇಶಾಂಗ ನೀತಿಗೆ ವಿಶೇಷವಾಗಿ ಒತ್ತು ನೀಡಿದೆ.

ಭಾರತ ಸಂವಿಧಾನವು **51ನೇ ವಿಧಿಯ ಮೂಲಕ ಅಂತರರಾಷ್ಟ್ರೀಯ ಸಹಬಾಳ್ವೆ ಹಾಗೂ ಅಂತರರಾಷ್ಟ್ರೀಯ ಕಾನೂನಿಗೆ ಗೌರವ** ತಂದುಕೊಡುವಂತಹ ವಿದೇಶಾಂಗ ನೀತಿಯನ್ನು ಸೂಚಿಸುತ್ತದೆ.

RGA ಸುಲಭ ಸಲಿಗೆ-9739138998

## ರಾಜ್ಯಶಾಸ್ತ್ರ ಅಧ್ಯಾಯ : 3 ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ ( ಎರಡು ಅಂಕಗಳು)

**ಅನ್ಯರಾಷ್ಟ್ರಗಳ ಜೊತೆಗಿನ ಸಂಬಂಧದ ಮಹತ್ವ :**

- ರಾಷ್ಟ್ರಗಳ ಜೊತೆಗೆ ವ್ಯವಹರಿಸಲು,
- ಒಂದು ರಾಷ್ಟ್ರ ಅಭಿವೃದ್ಧಿಯಾಗಲು.
- ರಾಷ್ಟ್ರಗಳ ಜೊತೆಗೆ ಉತ್ತಮ ಸಂಬಂಧವನ್ನು ಹೊಂದಲು.
- ನಮ್ಮ ಸಂವಿಧಾನದ **ನಾಲ್ಕನೇ ಭಾಗದಲ್ಲಿ** ರಾಜ್ಯನೀತಿ ನಿರ್ದೇಶಕ ತತ್ವಗಳಡಿಯಲ್ಲಿ **ವಿಧಿ 51 ರಲ್ಲಿ** ಅಂತರಾಷ್ಟ್ರೀಯ ಶಾಂತಿ ಮತ್ತು ಸೌಹಾರ್ದತೆಯ ಕುರಿತು ತಿಳಿಸಲಾಗಿದೆ.

**ಪ್ರಮುಖ ನೆರೆ ರಾಷ್ಟ್ರಗಳ ಸಂಬಂಧ:**

**1. ಭಾರತ ಮತ್ತು ಚೀನಾ :**

- **ಪಂಚಶೀಲ ತತ್ವಗಳ** ಒಪ್ಪಂದ.
- ಟಿಬೆಟ್ ವಿವಾಧದಿಂದ ಯುದ್ಧ
- ಗಡೀ ಸಮಸ್ಯೆಯು ಉಲ್ಬಣ.
- ಚೀನಾವು **ಅರುಣಾಚಲ ಪ್ರದೇಶ** ತನಗೆ ಸೇರಬೇಕೆಂದು ಪ್ರತಿಪಾದಿಸುತ್ತಿದೆ.
- **ದ್ವಿಪಕ್ಷಿಯ ರಾಯಭಾರ ಸಂಬಂಧ.**
- ವ್ಯಾಪಾರ ಮತ್ತು ವಾಣಿಜ್ಯ ಸಂಪರ್ಕ.
- **BRICS** ರಾಷ್ಟ್ರಗಳ ಗುಂಪು ರಚನೆ.

**2. ಭಾರತ ಮತ್ತು ಪಾಕಿಸ್ತಾನ :**

**ಭಾರತ ಮತ್ತು ಪಾಕತಸ್ತಾನ ನಡುವೆ ಸಂಬಂಧ ಉತ್ತಮವಾಗದೇಯಿರಲು ಕಾರಣಗಳು:**

1. ಜಮ್ಮು–ಕಾಶ್ಮೀರ,
2. ಭಯೋತ್ಪಾದನೆ,
3. ನೀರಿನ ಹಂಚಿಕೆ ಮುಂತಾದ ಸಮಸ್ಯೆಗಳಿವೆ.

- ಎರಡು ರಾಷ್ಟ್ರಗಳ ನಡುವೆ ಮೂರು ಭಾರಿ ಯುದ್ಧಗಳು ನಡೆದಿವೆ.

**ಎರಡು ರಾಷ್ಟ್ರಗಳ ನಡುವೆ ಉತ್ತಮ ಭಾಂದವ್ಯ ಹೊಂದಲು ಮಾಡಿದ ಪ್ರಯತ್ನಗಳು:**

1. ತಾಷ್ಕೆಂಟ್ ಒಪ್ಪಂದ,
2. ಸಿಮ್ಲಾ ಒಪ್ಪಂದ,
3. ಲಾಹೋರ್ ಬಸ್ ಯಾತ್ರೆ,
4. ಆಗ್ರಾ ಶೃಂಗಸಭೆಯಂತಹ ದ್ವಿಪಕ್ಷಿಯ ಮಾತುಕತೆಗಳನ್ನು ನಡೆಸಲಾಗಿದೆ.

**ಎರಡು ರಾಷ್ಟ್ರಗಳು ದ್ವಿಪಕ್ಷಿಯ ಮಾತುಕತೆಗಳು ವಿಫಲವಾಗಲು ಕಾರಣಗಳು:**

1. 2001ರಲ್ಲಿ ಭಾರತ ಸಂಸತ್ತಿನ ಮೇಲಿನ ದಾಳಿ,
2. 2008ರ ಮುಂಬೈನ ದಾಳಿ,
3. 2016ರ ಪಠಾಣ್ ಕೋಟ್ ದಾಳಿಗಳು ಪರಸ್ಪರ ಸಂಬಂಧಗಳ ವೃದ್ದಿಗೆ ಹಿನ್ನಡೆಯನ್ನು ಉಂಟುಮಾಡಿವೆ.

**ಎರಡು ರಾಷ್ಟ್ರಗಳ ನಡುವಿನ ಸಾಮ್ಯತೆ:**

- ಸಂಸ್ಕøತಿ ಮತ್ತು ಆರ್ಥಿಕ ವಿಷಯಗಳಲ್ಲಿ ಪರಸ್ಪರ ವಿನಿಮಯ ಕಾರ್ಯಗಳನ್ನು ಮುಂದುವರೆಸಿವೆ.
- ವ್ಯಾಪಾರ, ವಾಣಿಜ್ಯ ಸಂಬಂಧಗಳು ನಿರಂತರವಾಗಿ ಮುಂದುವರೆದಿವೆ.
- ಕ್ರೀಡೆ, ಸಾಂಸ್ಕøತಿಕ, ವ್ಯವಹಾರಗಳಲ್ಲಿ, ನೈಸರ್ಗಿಕ ವಿಕೋಪಗಳು ಸಂಭವಿಸಿದ ಸಂದರ್ಭಗಳಲ್ಲಿ ಎರಡು ರಾಷ್ಟ್ರಗಳು
- ಸೌಹಾರ್ಧಯುತವಾದ ಮತ್ತು ಪರಸ್ಪರ ಸಹಕಾರ ಹೊಂದಿವೆ.

**ಪ್ರಬಲ ರಾಷ್ಟ್ರಗಳೊಂದಿಗೆ ಸಂಬಂಧ:**

**1. ಭಾರತ ಮತ್ತು ರಷ್ಯಾ :**

- ಉತ್ತಮ ಬಾಂಧವ್ಯ ಹೊಂದಿದೆ
- ಭಾರತ–ಸೋವಿಯತ್ ಒಪ್ಪಂದ.

**ಭಾರತದ ಪರ ರಷ್ಯಾದ ನಿಲುವುಗಳು:**

- 1962ರ ಚೈನಾ ದಾಳಿಯನ್ನು ರಷ್ಯಾ ಖಂಡಿಸಿತ್ತು.
- 1961ರ ಗೋವಾ ವಿಮೋಚನೆಗೆ ಸಹಕಾರ.
- 1966ರ ತಾಷ್ಕೆಂಟ ಒಪ್ಪಂದಕ್ಕೆ ಸಹಕಾರ..
- 20 ವರ್ಷಗಳ ಶಾಂತಿ, ಮೈತ್ರಿ ಹಾಗೂ ಸಹಕಾರದ ಒಪ್ಪಂದಕ್ಕೆ ಸಹಿ.

**ಭಾರತಕ್ಕೆ ರಷ್ಯಾದ ನೆರವು:**

- **ಭಿಲಾಯಿ ಹಾಗೂ ಭೋಕಾರೋ** ಉಕ್ಕಿನ ಕಾರ್ಖಾನೆಗಳಿಗೆ ಸಹಕಾರ.
- ಕೈಗಾರಿಕೆ ಹಾಗೂ ವಾಣಿಜ್ಯ ಕ್ಷೇತ್ರಗಳ ಬೆಳವಣಿಗೆಗೆ ನೆರವು.

2. ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವಕ್ಕೆ ಸಹಕಾರ.

**3. ಭಾರತ ಮತ್ತು ಅಮೆರಿಕ :**

RGA ಸುಲಭಸಲಿಗೆಗ 9739138998

- ಪ್ರಜಾತಂತ್ರ ವ್ಯವಸ್ಥೆ ಹೊಂದಿವೆ.
- ಪಂಚವಾರ್ಷಿಕ ಯೋಜನೆಗೆ ಅಮೆರಿಕಾ ಸಹಕಾರ ನೀಡಿದೆ.
- ಚೀನಾ ಆಕ್ರಮಣ ಸಂದರ್ಭದಲ್ಲಿ ಅಮೆರಿಕಾದ ಸಹಾಯ ಸಿಕ್ಕಿತ್ತು.
- ಭಯೋತ್ಪಾದನೆಯ ಸಮಾನ ಹಿತಾಸಕ್ತಿ.
- ಪ್ರಮುಖ ಕ್ಷೇತ್ರಗಳಲ್ಲಿ ಅಮೆರಿಕಾದೊಂದಿಗೆ ಉತ್ತಮ ಬಾಂಧವ್ಯ.
- ಜಾಗತಿಕ ಶಾಂತಿಗಾಗಿ ಸಮಾನ ಧೋರಣೆ ಹೊಂದಿವೆ.

RGA ಸುಲಭಸಲಿಗುರಿ- 9739138998